ದಿನಾಂಕ : 22.08.2022 <u>ಓ.ಎಸ್. 36/2018 ರಲ್ಲಿ</u>

ಪಿ.ಡಬ್ಲ್ಯೂ-1(ಜಿ. ವೆಂಕಟರಮಣಯ್ಯ)

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಎ ಸಿ ಸಿ ವಕೀಲರಿಂದಃ-</u>

ಸರ್ವೇ ನಂಬರ್ 108 ರ ಜಮೀನಿನ ಸ್ವತ್ತು ಶಿವನಹಳ್ಳಿ ಗ್ರಾಮಕ್ಕೆ ಸೇರಿದ್ದು, ಅದೇ ಕೊನೆಯ ಸರ್ವೇ ನಂಬರ್ ಆಗಿದ್ದು ಶಿವನಹಳ್ಳಿನಂತರ ವಿಭೂತಿಕೆರೆ ಗ್ರಾಮದ ಸರ್ವೇ ನಂಬರ್ ಗಳು ಬರುತ್ತವೆ ಎಂದರೆ ಸರಿ. ದಾವಾ ಆಸ್ತಿಯ ಚಕ್‌ಬಂದಿ ನನಗೆ ತಿಳಿದಿರುತ್ತದೆ, ಪೂರ್ವಕ್ಕೆ ವೆಂಕಟಾಚಲಯ್ಯನವರ ಜಮೀನು, ಪಶ್ಚಿಮಕ್ಕೆ ಮುನಿಯಪ್ಪನವರ ಜಮೀನು, ಉತ್ತರಕ್ಕೆ ವೆಂಕಟಪ್ಪನವರ ಜಮೀನು ಮತ್ತು ದಕ್ಷಿಣಕ್ಕೆ ಕೊಂಡಯ್ಯನವರ ಜಮೀನು ಇರುತ್ತದೆ. ಈಗ ಉತ್ತರಕ್ಕೆ ವೆಂಕಟಪ್ಪನವರು ಜಮೀನನ್ನು ಮಾರಾಟ ಮಾಡಿರುತ್ತಾರೆ. ಈಗ ಉತ್ತರಕ್ಕೆ ಯಾರು ಜಮೀನನ್ನು ಖರೀದಿಸಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ.

ನಾನು ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಸರ್ವೇಗೆ ಅರ್ಜಿ ಹಾಕಿದ್ದು ಸದರಿ ಅರ್ಜಿಗೆ ಪ್ರತಿವಾದಿ ತಕರಾರು ಸಲ್ಲಿಸಿದ ಕಾರಣ ತಹಶೀಲ್ದಾರ್ ರವರ ನ್ಯಾಯಾಲಯದಲ್ಲಿ ಎಡಿಎಲ್‌ಆರ್ ಪ್ರಕರಣ ಇತ್ಯರ್ಥಕ್ಕೆ ಬಾಕಿ ಇರುತ್ತದೆ ಎಂದರೆ ಸರಿ. ನಾನು ಸರ್ವೇಗೆ ಅರ್ಜಿ ಸಲ್ಲಿಸಿದ ನಂತರ ಕಂದಾಯ ಅಧಿಕಾರಿಗಳು ಸರ್ವೇ ನಕಾಶೆ ತಯಾರಿಸಿ ಅದನ್ನು ಎಡಿಎಲ್‌ಆರ್ ಪ್ರಕರಣದಲ್ಲಿ ಹಾಜರುಪಡಿಸಿರುತ್ತಾರೆ ಎಂದರೆ ಸರಿ. ಕಂದಾಯ ಅಧಿಕಾರಿಗಳು ಸರ್ವೇ ನಂಬರ್ 108 ರ ಜಮೀನನ್ನು

ಸರ್ವೇ ಮಾಡಿ ಯಾರು ಯಾರು ಇರುತ್ತಾರೆ ಎಂದು ನಮೂದು ಮಾಡಿ ವರದಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ, ಸಾಕ್ಷಿಯು ಮುಂದುವರೆದು ಸುಳ್ಳು ವರದಿಯನ್ನು ಸಲ್ಲಿಸಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಅರ್ಜಿ ಸಲ್ಲಿಸಿದ ಮೇರೆಗೆ ನಾನು ತೋರಿಸಿದ ಆಧಾರದ ಮೇಲೆ ಸರ್ವೇಯರ್ ರವರು ನಕಾಶೆ ತಯಾರಿಸಿ ವರದಿ ನೀಡಿರುತ್ತಾರೆ ಎಂದರೆ ಸಾಕ್ಷಿಯು ನಾನೇ ಅರ್ಜಿ ಸಲ್ಲಿಸಿರುತ್ತೇನೆ ಆದರೆ ಅನುಭವ ಯಾರು ಯಾರು ಇರುತ್ತಾರೆ ಎಂದು ಅವರೇ ಬರೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಎಡಿಎಲ್ಆರ್ ಪ್ರಕರಣದಲ್ಲಿ ಸಲ್ಲಿಸಿದ್ದ ಸರ್ವೇ ವರದಿಯನ್ನು ನಾನು ನೋಡಿರುವುದಿಲ್ಲ. ಸಾಕ್ಷಿಗೆ ಸದರಿ ವರದಿಯು ಸರಿ ಇರುವುದಿಲ್ಲ ಎಂದು ನೀವು ಹೇಗೆ ಹೇಳುತ್ತೀರಿ ಎಂದರೆ ಸಾಕ್ಷಿಯು ಸರ್ವೇ ಅಧಿಕಾರಿಗಳು ಸರ್ವೇ ಮಾಡಲು ಜಮೀನಿನ ಬಳಿ ಬಂದಾಗ ನಾನು ಹಾಜರಿರಲಿಲ್ಲ ಆದ್ದರಿಂದ ಸರ್ವೇ ವರದಿ ಸರಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ಸರ್ವೇ ವರದಿಯಲ್ಲಿ ಇರುವ ನೀವು ನಿಮ್ಮ ಸಹಿ ಅನ್ನು ಹಾಕಿರುತ್ತೀರಾ ಎಂದರೆ ಸಾಕ್ಷಿ ನನಗೆ ನೆನಪಿರುವುದಿಲ್ಲ ಎನ್ನುತ್ತಾರೆ. ಎಡಿಎಲ್ಆರ್ ಪ್ರಕರಣದಲ್ಲಿ ಸಲ್ಲಿಸಿರುವ ಸರ್ವೇ ವರದಿ ಸರಿ ಇರುವುದಿಲ್ಲ ಎಂದು ಅದನ್ನು ನೀವು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿರುತ್ತೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿದು, ಆದ್ದರಿಂದ ನ್ಯಾಯಾಲಯಕ್ಕೆ ಬಂದಿರುತ್ತೇನೆ ಎಂದು ನುಡಿಯುತ್ತಾರೆ.

ನಾನು ಅನುಭವನಲ್ಲಿ ಇದ್ದೇನೆ ಎಂದು ಹೇಳುವ ಜಮೀನು ವಿಭೂತಿಕೆರೆ ಗ್ರಾಮದ ಸರ್ಕಾರಿ ಗೋಮಾಳದ ಜಾಗವಾಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಕ್ರಯ ಪತ್ರದಲ್ಲಿ ಇರುವ ಚಕ್‌ಬಂದಿ, ದಾವೆಯಲ್ಲಿ ತೋರಿಸಿರುವ ಚಕ್ಬಂದಿ ಜಮೀನು ಸರ್ವೇ ನಂಬರಿ 108 ರ

ಜಮೀನಿನ ಚಕ್‌ಬಂದಿ ಆಗಿರುವುದಿಲ್ಲ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಅದು ಸರ್ವೇ ನಂಬರ್ 108 ರ ಜಮೀನಿನ ಚಕ್‌ಬಂದಿ ಎನ್ನುತ್ತಾರೆ. ದಾವೆಯಲ್ಲಿ ತೋರಿಸಿರುವ ವಿಸ್ತೀರ್ಣದ ಜಮೀನನ್ನು ನಾನು ಕ್ರಯಕ್ಕೆ ತೆಗೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಸರ್ವೇ ನಂಬರ್ 108 ರಲ್ಲಿ 13 ಗುಂಟೆ ಜಮೀನಿನಲ್ಲಿ ಮಾತ್ರ ನಾನು ಅನುಭವದಲ್ಲಿ ಇದ್ದು ಉಳಿಕೆ ಜಮೀನಿನು ಬೇರೆಯವರ ಸ್ವಾಧೀನದಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಸರ್ವೇ ನಂಬರ್ 108 ರ ಉಳಿಕೆ ಜಮೀನಿನಲ್ಲಿ ಬೇರೆ ವ್ಯಕ್ತಿಗಳು ಸ್ವಾಧೀನದಲ್ಲಿ ಇದ್ದು ಅವರುಗಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಹೇಳಿರುವ ಮಾಹಿತಿಗಳು ಸುಳ್ಳಾಗಿದ್ದು ನನ್ನ ಅನುಕೂಲಕ್ಕೆ ತಕ್ಕಂತೆ ಹೇಳಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಮಹೇಶ್ ಬಿ.ಟಿ)
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.